ಮಾತ್ರ ಅವನಿಗೆ ಗೊತ್ತು. 'ತುಂಬಾ ಪ್ರಾಚೀನ ದೇವಾಲಯ ಸರ್, ಬಹಳ ಮಹಿಮೆಯ ದೇವರು' ಎಂದೆಲ್ಲ ವರ್ಣಿಸತೊಡಗಿದ. ನನ್ನ ಪಕ್ಕದಲ್ಲಿ ಕುಳಿತ ಸ್ವಾಮೀಜಿ ನನಗೂ ಹೊಸ ಪರಿಚಯವೇ ಎಂದು ಅವನಿಗಾಗಲೇ ತಿಳಿದಿತ್ತು. ಅವರನ್ನೂ ಮಾತಿಗೆಳೆದ. 'ತಾತಾ , ನಿಮ್ಮ ಊರು?' ಎಂದ. 'ಸದಾ ಸಂಚಾರದಲ್ಲಿರುವ ನನ್ನಂಥವರಿಗೆ ಯಾವುದಪ್ಪ ಊರು? ಆದರೆ ಕಳೆದ ಎರಡು ವರ್ಷದಿಂದ ಮಾಗಡಿಯಲ್ಲೇ ಇದ್ದೇನೆ' ಎಂದರು. ಮಾಗಡಿಯ ಶಿವ ದೇವಾಲಯದ ಪಕ್ಕದಲ್ಲೆಲ್ಲೋ ಸಣ್ಣ ಗುಡಿಸಲು ಮಾಡಿಕೊಂಡಿದ್ದಾರಂತೆ. 'ನಿಮ್ಮನ್ನು ನಾನೆಂದೂ ನೋಡೇ ಇಲ್ಲ. ಬಿಡಿ' ಎಂದು ಅಚ್ಚರಿಯಿಂದ ಹೇಳಿದ ಭದ್ರಯ್ಯ. 'ಹೊರಗೆ ಅಷ್ಟಾಗಿ ಬರುವುದಿಲ್ಲ, ಕಣಪ್ಪ' ಎಂದರು ನಿಧಾನವಾಗಿ. ಈ ಮಾತುಗಳ ನಡುವೆಯೇ ಕಿತ್ತಳೆ ಹಣ್ಣು ಬಿಡಿಸಿ ನನಗೆ ಒಂದೆರಡು ತೊಳೆ ಕೊಟ್ಟರು. ಅವನಿಗೂ ಕೊಟ್ಟರು. ಅರೆಕ್ಷಣ ರಿಕ್ಷಾ ನಿಲ್ಲಿಸಿ 'ಪ್ರಸಾದ' ಎಂದು ಕಣ್ಣಿಗೊತ್ತಿಕೊಂಡು ಬಾಯೊಳಗಿಟ್ಟುಕೊಂಡ. ಒಣಹುಲ್ಲಿನ ಬೇಣಗಳು ರಸ್ತೆ ತುಂಬಾ ಎರಡೂ ಕಡೆ. ಒಂದೆಡೆ ಅಂತೂ ಒಣಗಿದ ಹುಲ್ಲಿನ ಕಂತೆಗೆ ಬೆಂಕಿಕೊಟ್ಟು ಯಜ್ಞ ಮಾಡುತ್ತಿರುವ ಭಂಗಿಯಲ್ಲಿ ಕೆಲವು ಹಳ್ಳಿಗರು ಕುಳಿತಿದ್ದರು. ಅವರಲ್ಲೇ ಒಂದಷ್ಟು ಜನ ಬೀಡಿ ಸೇದುತ್ತಾ, ಹಾಡು ಹೇಳುತ್ತಾ ಕುಶಾಲಿನ ಮನಸ್ಥಿತಿಯಲ್ಲಿದ್ದರು. ವಿವರಗಳಿಲ್ಲದ ದೃಶ್ಯಗಳು ನಮ್ಮೊಳಗನ್ನೇ ತೆರೆದು ತೋರುವವೆ!

ಮುದುಗೆರೆ ದೇವಾಲಯದ ಬಳಿ ನಮ್ಮನ್ನು ಬಿಟ್ಟು ರಿಕ್ಷಾದವನು ವಾಪಸು ಹೋದ. ಸಂಜೆ ನಾಲ್ಕಕ್ಕೆ ಬರುವುದಾಗಿ ಮತ್ತೆ ಮತ್ತೆ ಭರವಸೆ ನೀಡಿದ. ಅವನ ಫೋನ್ ನಂಬರ್ ತೆಗೆದುಕೊಂಡಿದ್ದೆನಾದ್ದರಿಂದ ನನಗೇನೂ ಚಿಂತೆ ಇರಲಿಲ್ಲ. ಇಳಿದ ಮೇಲೆ ಸ್ವಾಮಿಗಳು ಎಲ್ಲೋ ಹೋಗುವರೆಂದು ಎಣಿಸಿದ್ದೆ. ನೋಡಿದರೆ ಅವರು ನನ್ನನ್ನು ಬಿಟ್ಟು ಹೋಗುವ ಲಕ್ಷಣ ಕಾಣಲಿಲ್ಲ. 'ಅಲ್ಲ ಸ್ವಾಮಿ, ನೀವು ಇಲ್ಲೆಲ್ಲೋ ಕೆಲಸ ಇದೆ ಅಂದಹಾಗಿತ್ತು, ಅಲ್ಲವೆ?' ಎಂದೆ. ಅವರು ತಕ್ಷಣ ಉತ್ತರಿಸಲಿಲ್ಲ ನಿಜ, ಆದರೆ ಅದೆಷ್ಟೋ ಹೊತ್ತು ಪ್ರಶ್ನೆಯನ್ನೇ ಮೆಲುಕು ಹಾಕುತ್ತಿರುವಂತೆ ಕಂಡರು. ಬಾಯಲ್ಲಿ ಅಡಿಕೆಹೋಳು ಇಟ್ಟುಕೊಂಡವರಂತೆ ಅಗಿಯುತ್ತಲೇ, ಉಗುಳು ನುಂಗುತ್ತಲೇ ಇದ್ದರು. 'ನಾನಾದರೂ ದೇವಾಲಯ ನೋಡಲು ಬಂದವನೇ, ಇನ್ನೆಲ್ಲೂ ಹೋಗಬೇಕಾದುದಿಲ್ಲ' ಎಂದರು. ನಿಧಾನವಾಗಿ ನಡೆಯುತ್ತಾ ದೇವಾಲಯದ ಇಂಚಿಂಚೂ ತಿಳಿದಿದೆ ಎಂಬಂತೆ ವಿವರಿಸಿದ್ದನ್ನು ಕಂಡು ಆಶ್ಚರ್ಯವೇ ಆಯಿತು. ಹತ್ತಾರು ವರ್ಷಗಳ ಹಿಂದೆ ದೇವಾಲಯದ ಜೀರ್ಣೋದ್ಧಾರ ನಡೆಯಿತೆಂದು ತಿಳಿಸಿದರು. 'ರಂಗನಾಥಸ್ವಾಮಿ ನಿಂತಿದ್ದಾನೆ ನೋಡಿ, ಅಪರೂಪದ ವಿಗ್ರಹ, ನೂರಾರು ವರ್ಷ ಹಿಂದಿನದು. ಕಾಮನ ಹುಣ್ಣಿಮೆಯಂದು ಇಲ್ಲಿ ರಥೋತ್ಸವ ನಡೆಯುತ್ತದೆ' ಎಂದೆಲ್ಲ ವಿವರಿಸಿದರು. ಈ ಪ್ರತಿಮೆಗೆ ಜೇನು (ಮಧು) ತಾನಾಗೇ ಅಭಿಷೇಕವಾಗುತ್ತಿತ್ತಂತೆ, ಹಾಗೆ ಇದು ಮುಂದೆ ಊರ ಹೆಸರೂ ಆಯಿತು ಎನ್ನುತ್ತಾರೆ' ಎಂದರು. 'ತಮಗೆ ಈ ವಿಷಯಗಳೆಲ್ಲ ಎಷ್ಟು ಚೆನ್ನಾಗಿ ತಿಳಿದಿವೆ' ಎಂದೆ ಅಚ್ಚರಿಯಿಂದ. ಸ್ವಾಮಿಗಳು ನಿಧಾನವಾಗಿ 'ನಾನು ಹುಟ್ಟಿದ ಊರು ಇಲ್ಲೇ ಕೆಲವು ಮೈಲಿಗಳ ದೂರದಲ್ಲಿದೆ. ಚಿಕ್ಕಂದಿನಲ್ಲಿ ಇಲ್ಲೆಲ್ಲ ಓಡಿಯಾಡಿದ್ದೇನೆ' ಎಂದರು.

ಈಗ ನನ್ನ ಕುತೂಹಲ ಹೆಚ್ಚಿತು. 'ಓಹೋ, ನಿಮ್ಮ ಹುಟ್ಟೂರಿನ ಕಡೆ ಬರುವ ಸೆಳೆತ ಉಂಟಾಗಿರಬೇಕು. ಹಾಗೆ ಇವತ್ತು ಬಂದಿದ್ದು' ಅಂದೆ. 'ಹೌದು' ಅಂದರು. 'ಇಲ್ಲೇ ಮರದ ನೆರಳಲ್ಲಿ ಕೂರೋಣವೇ?' ಎಂದು ಕೇಳಿದ್ದಕ್ಕೆ ಒಪ್ಪಿದರು. ಮಧ್ಯಾಹ್ನ ಉಣ್ಣಲೆಂದು ಮಾಗಡಿಯಿಂದಲೇ ಊಟ ಕಟ್ಟಿಸಿಕೊಂಡು ಬಂದಿದ್ದೆ. ಒಂದಷ್ಟು ಬಾಳೆಹಣ್ಣುಗಳೂ ಇದ್ದವು. 'ಇಬ್ಬರೂ ಈ ಊಟ ಹಂಚಿಕೊಂಡು ಊಟ ಮಾಡೋಣ' ಎಂದೆ. 'ನನಗೆ ಊಟ ಬೇಕಾಗುವುದಿಲ್ಲ. ಬೆಳಿಗ್ಗೆ ಗಂಜಿ ಅನ್ನ ಮಾಡಿಕೊಂಡಿದ್ದೆ. ಇನ್ನು ರಾತ್ರಿ ಒಂದು ಕಪ್ ಹಾಲು ಸಿಕ್ಕರೆ ಕುಡಿಯುತ್ತೇನೆ, ಇಲ್ಲವಾದರೆ ಇಲ್ಲ' ಎಂದರು. ತುಂಬ ಬಲವಂತ ಮಾಡಿದ್ದಕ್ಕೆ ಒಂದು ಬಾಳೆಹಣ್ಣು

